ನನಗೆ ಇಷ್ಟವಿಲ್ಲ. ಸದ್ಯಕ್ಕೆ ಇನ್ನೊಂದು ಹೊಸ ಸಿನಿಮಾ ಮಾಡುವ ಸಿದ್ಧತೆಯಲ್ಲಿದ್ದೇನೆ!'

> 'ಸಿನಿಮಾದ ಸೆಟಲೈಟ್ ಹಕ್ಕುಗಳನ್ನು ಟೀವಿಯವರು ಖರೀದಿಸುತ್ತಿಲ್ಲ ಎಂದಾದರೆ ಅವರವರು ಕುಳಿತುಕೊಂಡು ಮಾತನಾಡಿ ಬಗೆಹರಿಸಿಕೊಳ್ಳಲಿ. ರಿಯಾಲಿಟಿ ಷೋಗೆ ಏಕೆ ವಿರೋಧ ಮಾಡುತ್ತೀರಿ?'
>
> –ರಮೇಶ್ ಅರವಿಂದ್



**ಆರೋಗ್ಯಕರ ಸ್ಪರ್ಧೆ**

ಹೊಸ ಮಾಧ್ಯಮಗಳು ಬೆಳೆದಂತೆಲ್ಲ ನಟರಾದವರು ಹೊಸ ಅವಕಾಶಗಳನ್ನು ಹುಡುಕಿಕೊಳ್ಳುವುದರಲ್ಲಿ ತಪ್ಪೇನಿಲ್ಲ. ಜತೆಗೆ ಸಿನಿಮಾಗಳಲ್ಲಿ ಕೆಲಸ ಇಲ್ಲದಿದ್ದಾಗ ನಟ– ನಟಿಯರು ಟೀವಿ ಷೋಗಳಲ್ಲಿ ಭಾಗವಹಿಸದೆ ಇನ್ನೇನು ಮಾಡಬೇಕು? ಬೆಳ್ಳಿ ಪರದೆ ಮತ್ತು ಟೀವಿ ನಡುವೆ ಸ್ಪರ್ಧೆ ಏರ್ಪಡುವುದನ್ನು ಆರೋಗ್ಯಕರವಾಗಿ ನಿರ್ವಹಿಸುವುದು ಹೇಗೆ.. ಎನ್ನುವುದು ಈಗ ಇರುವ ಹೊಸ ಸವಾಲು. ಟೀವಿ ಎಷ್ಟೇ ಸ್ಪರ್ಧೆ ಒಡ್ಡಿದರೂ ಅದಕ್ಕಿರುವ ಮಿತಿಗಳು ಇದ್ದೇ ಇರುತ್ತವೆ. ಹಿರಿತೆರೆ ಮನಸ್ಸು ಮಾಡಿದರೆ ಈ ಸವಾಲನ್ನು ಎದುರಿಸುವುದು ದೊಡ್ಡ ಸಮಸ್ಯೆ ಅಲ್ಲವೇ ಅಲ್ಲ. 'ಬಾಹುಬಲಿ'ಯಂತಹ ಸಿನಿಮಾವನ್ನು ಕಿರುತೆರೆಯಲ್ಲಿ ಸೃಷ್ಟಿಸಲು ಸಾಧ್ಯವೆ? ಅಮಿತಾಭ್ ಬಚ್ಚನ್‌ರಂತಹ ಮೇರುನಟ ಕಿರುತೆರೆಯಲ್ಲಿ ಕುಳಿತು 'ಕೌನ್ ಬನೇಗಾ ಕರೋಡ್‌ಪತಿ' ಕಾರ್ಯಕ್ರಮ ನಡೆಸಿಕೊಡುತ್ತಿರುವಾಗಲೂ, ಬಾಲಿವುಡ್‌ನಲ್ಲಿ ಹತ್ತಾರು ಸೂಪರ್ ಸಕ್ಸೆಸ್ ಪಡೆದ ಹಿಂದಿ ಸಿನಿಮಾಗಳು ಬಂದಿವೆ.

ಸಿನಿಮಾದ ಸೂಪರ್ ಹೀರೋಗಳು ಟೀವಿ ಗೆ ಬರಬಾರದು ಎನ್ನುವ ಮಡಿವಂತಿಕೆ ಆರಂಭದಲ್ಲಿ ಕೆಲವರಿಗೆ ಇದ್ದದ್ದು ಸುಳ್ಳಲ್ಲ. ಆದರೆ ಟೀವಿ ಯಲ್ಲಿ ಸಣ್ಣದಾಗಿ ಮುಖ ತೋರಿಸಿ, ನಟರಾಗಿ ಬೆಳೆದು ಈಗ ಚಿತ್ರರಂಗದಲ್ಲಿ ಸೂಪರ್ ಹೀರೊ ಆಗಿರುವ ನಟ– ನಟಿಯರೂ ಸಾಕಷ್ಟು ಇದ್ದಾರೆ. ದೊಡ್ಡ ಉದಾಹರಣೆ ಕೊಡುವುದಾದರೆ ಯಶ್ ಮತ್ತು ರಾಧಿಕಾ ಪಂಡಿತ್! ಯಶ್ ಹೊಂದಿರುವ ಬಹುದೊಡ್ಡ ಪ್ರೇಕ್ಷಕ ವರ್ಗದಲ್ಲಿ ಅವರ ಟೀವಿ ಧಾರಾವಾಹಿಯನ್ನು ನೋಡದೇ ಇರುವವರ ಸಂಖ್ಯೆಯೂ ದೊಡ್ಡದಿದೆ ಎನ್ನುವುದು ಗಮನಾರ್ಹ ಅಂಶ. ಒಂದು ಕಾಲದಲ್ಲಿ ಕಿರುತೆರೆಯ ಬಗ್ಗೆ ಉಪೇಕ್ಷೆಯ ನೋಟ ಬೀರಿದ್ದ ರವಿಚಂದ್ರನ್ ಕೂಡಾ ಈಗ ಅಲ್ಲಿ ಬಹುದೊಡ್ಡ ಆಸ್ತಿ. ಸಿನಿಮಾದಲ್ಲಿ ಡ್ಯಾನ್ಸ್ ಮಾಡದೆಯೂ 'ಬಿಗ್ ಹಿಟ್'ಗಳನ್ನು ಕೊಟ್ಟ ರವಿಚಂದ್ರನ್, ಈಗ ಕಿರುತೆರೆಯಲ್ಲಿ ಡ್ಯಾನ್ಸ್ ಸ್ಪರ್ಧೆಯ ತೀರ್ಪುಗಾರರಾಗಿ ಮಿಂಚುತ್ತಿರುವುದು ಅವರ ಹೀರೊ ಇಮೇಜ್‌ನಿಂದಲೇ ಎನ್ನುವುದು ಸ್ಪಷ್ಟ.

ಟೀವಿ ಉದ್ಯಮ ಸಿನಿಮಾಗಿಂತ ಹೆಚ್ಚು 'ವರ್ಕಿಂಗ್ ಫ್ರೆಂಡ್ಲೀ' ಎನ್ನುವುದು ರಿಯಾಲಿಟಿ ಷೋಗಳಲ್ಲಿ ಭಾಗವಹಿಸುವುದಕ್ಕೆ ಹೀರೋಗಳು ಕೊಡುವ ಒಂದು ಮುಖ್ಯ ಕಾರಣ. ಅದು ನಿಜವೂ ಹೌದು. ಸಿನಿಮಾದಲ್ಲಿ ಇಡೀ ದಿನ ಶೂಟಿಂಗ್ ಮಾಡಿದರೆ ಸಿಗುವ ಸಂಭಾವನೆಗಿಂತ ಹೆಚ್ಚು ಹಣವನ್ನು ಟೀವಿ ಶೂಟಿಂಗ್‌ನಲ್ಲಿ ಪಡೆಯುವ ಹೀರೋಗಳಿದ್ದಾರೆ. ಶೂಟಿಂಗ್ ಅವಧಿಯೂ ಕಡಿಮೆ. ಶ್ರಮವೂ ಕಡಿಮೆ. ಕಡಿಮೆ ಶ್ರಮದಲ್ಲಿ ಹೆಚ್ಚು ಹಣ ದೊರಕುವುದಾದರೆ ಬಿಡುವವರು ಯಾರು? ನಿರ್ಮಾಪಕರೂ ಅದನ್ನೇ ತಾನೇ ಬಯಸುವುದು?

ಟೀವಿಯ ಮೂಲಕ ಹೆಚ್ಚು ಜನರಿಗೆ ತಲುಪಲು ಸಾಧ್ಯವಾಗುತ್ತದೆ ಎನ್ನುವುದು ಇನ್ನೊಂದು ಕಾರಣ. ಒಬ್ಬ ಹೀರೋನ ಸಿನಿಮಾವನ್ನು ಒಟ್ಟಾರೆ ಹತ್ತು ಲಕ್ಷ ಜನ ನೋಡಬಹುದು. ಟೀವಿಯಲ್ಲಿ ಒಂದು ಗಂಟೆ ಕುಳಿತರೆ ಒಂದೇ ದಿನದಲ್ಲಿ ಅದರ ಐದು ಪಟ್ಟು ಹೆಚ್ಚು ಜನ ನೋಡುತ್ತಾರೆ.

ಹಾಗೆಂದು ಹೀರೋಗಳಿಗೆ ಟೀವಿ ಚಾನೆಲ್‌ಗಳು ಅತ್ಯಗತ್ಯ ಎನ್ನಲಾಗದು. ಟೀವಿ ರಿಯಾಲಿಟಿ ಷೋಗಳಲ್ಲಿ ಮುಖ ತೋರಿಸದೇ ಸೂಪರ್‌ಹಿಟ್ ಸಿನಿಮಾಗಳನ್ನು ಈಗಲೂ ಕೊಡುತ್ತಿರುವ ನಟರಿದ್ದಾರೆ. ಹಾಗೆಯೇ ಟೀವಿ ಜನಪ್ರಿಯತೆಯನ್ನು ಸಿನಿಮಾಕ್ಕೂ, ಸಿನಿಮಾ ಜನಪ್ರಿಯತೆಯನ್ನು ಟೀವಿ ಷೋಗೂ ಬಳಸಿಕೊಳ್ಳುವ ಬುದ್ಧಿವಂತರೂ ಇದ್ದಾರೆ. ಹಾಗೆ ನೋಡಿದರೆ ಟೀವಿ ಚಾನೆಲ್‌ಗಳಿಗೇ ಹೀರೋಗಳ ಅಗತ್ಯ ಹೆಚ್ಚಿದೆ. ದುಬಾರಿ ದರ ಕೊಟ್ಟು ಹೀರೋ ಒಬ್ಬರ ಸಿನಿಮಾ ಹಕ್ಕುಗಳನ್ನು ಖರೀದಿಸುವ ಬದಲು, ರಿಯಾಲಿಟಿ ಷೋ ಗೇ ಅದಕ್ಕಿಂತ ಕಡಿಮೆ ಹಣ ಕೊಟ್ಟು ಬುಕ್ ಮಾಡಿ, ಹೆಚ್ಚು ಟಿಆರ್‌ಪಿ ಗಳಿಸುವುದು ಜಾಣತನದ ವ್ಯವಹಾರ ಎನ್ನುವುದನ್ನು ಟೀವಿ ಚಾನೆಲ್‌ಗಳು ಕಂಡುಕೊಂಡಿವೆ.

ಈ ಟ್ರೆಂಡ್ ಸದಾ ಕಾಲವೂ ಉಳಿಯುತ್ತದೆಯೆ.. ಎನ್ನುವುದಕ್ಕೆ ಉತ್ತರ ಸ್ಪಷ್ಟವಿಲ್ಲ. ಒಂದು ಕಾಲದಲ್ಲಿ ಟೀವಿ ಧಾರಾವಾಹಿಗಳನ್ನು ಜನ ಮುಗಿಬಿದ್ದು ನೋಡುತ್ತಿದ್ದರು. ಈಗ ಅಷ್ಟೊಂದು ಕ್ರೇಝ್ ಇಲ್ಲ. ಧಾರಾವಾಹಿಗಳ ಕ್ರೇಝ್ ತಗ್ಗಿದಂತೆ ನಾಳೆ ರಿಯಾಲಿಟಿ ಷೋಗಳ ಕ್ರೇಝ್ ಕೂಡಾ




ಸಂಧಿಲಿನ್
SANDHILIN सन्धिलिन

ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ

ನೋವಿಗೆ ಶೀಘ್ರ ಪರಿಣಾಮಕಾರಿ




- ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
- ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY

ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ